## ಸಂಪಾದಕೀಯ

# ಭಗವದ್ರಹಸ್ಯ

### (ಭಾಗ ೨ – ಜೀವಿಯ ರಹಸ್ಯ)

### ಮಾನವನ ಅಧ್ಯಯನ

**ಮಾ**ನವ ಹಲವು ಬಗೆಯ ಅಧ್ಯಯನಗಳನ್ನು ಕೈಗೊಳ್ಳುತ್ತಾನೆ. ಅವುಗಳಲ್ಲೆಲ್ಲ ಒಂದು ಸಮಾನ ಅಂಶವೆಂದರೆ, ಅಧ್ಯಯನ ಮಾಡುವವನು ಮತ್ತು ಅಧ್ಯಯನ ಮಾಡುವ ವಸ್ತು ಬೇರೆ ಬೇರೆ ಇರುತ್ತವೆ. ಆದರೆ, ಜ್ಞಾನದ ಇತರೆಲ್ಲ ಪ್ರಕಾರಗಳಿಗಿಂತ ವಿಶಿಷ್ಟವಾದ ಒಂದು ಜ್ಞಾನವಿದೆ. ಇದು ಯಾರು ವಿಷಯವಸ್ತುಗಳ ಅಧ್ಯಯನವನ್ನು ಕೈಗೊಳ್ಳುವನೋ ಅವನ ಅಧ್ಯಯನ. ಇದು ವಿಷಯಜ್ಞಾನದಂತಲ್ಲ. ಇದರಲ್ಲಿ ಜ್ಞಾತೃ (ತಿಳಿದುಕೊಳ್ಳುವವನು) ಮತ್ತು ಜ್ಞೇಯ (ತಿಳಿದುಕೊಳ್ಳುವ ವಿಷಯ) ಒಂದೇ ಆಗಿರುತ್ತದೆ.

> “ಎಲ್ಲಾ ಜೀವಿಗಳಲ್ಲಿಯೂ, ತಾನು ತಿಳಿದುಕೊಳ್ಳುತ್ತೇನೆ ಎಂದು ಹೇಳುವ ಪ್ರಾಣಿ ಮನುಷ್ಯನೊಬ್ಬನೇ; ತಾನು ತಿಳಿದುಕೊಂಡಿದ್ದನ್ನು ಕಂಡುಕೊಳ್ಳುವವನೂ ಅವನೊಬ್ಬನೇ. ಅವನು ಭವಿಷ್ಯವನ್ನು ತಿಳಿದಿರುತ್ತಾನೆ; ಈ ಲೋಕದ ಬಗ್ಗೆ ಹಾಗೆಯೇ ಪರಲೋಕದ ಬಗ್ಗೆಯೂ ಅರಿತುಕೊಳ್ಳುತ್ತಾನೆ. ಹಾಗೆಯೇ ಅವನು ಈ ಮರ್ತ್ಯ ಅಸ್ತಿತ್ವದ ಮೂಲಕವೇ ಅಮೃತತ್ತ್ವವನ್ನು ತಿಳಿಯಲೂ ಬಯಸುತ್ತಾನೆ. ಹೀಗೆ ಅವನು ತಾನು ಸಾಧಿಸಬಲ್ಲೆನೆಂಬ ಪ್ರಜ್ಞೆಯನ್ನು ಹೊಂದಿರುತ್ತಾನೆ. ಆದರೆ ಇತರ ಪ್ರಾಣಿಗಳು ತಮ್ಮಲ್ಲುಂಟಾಗುವ ಹಸಿವು ಮತ್ತು ಬಾಯಾರಿಕೆಗಳ ಅರಿವನ್ನಷ್ಟೇ ಹೊಂದಿರುತ್ತವೆ.” –ಐತರೇಯ ಬ್ರಾಹ್ಮಣ

ಪಾಶ್ಚಾತ್ಯ ಮನೋವಿಜ್ಞಾನದ ಉಗಮವನ್ನು ನಾವು ಕಾಣುವುದು ಪ್ಲೇಟೋವಿನ ಸಂವಾದಗಳು ಮತ್ತು ಅರಿಸ್ಟಾಟಲಿನ On the Soul ಎನ್ನುವ ಕೃತಿಯಲ್ಲಿ. Psychology ಎಂಬ ಗ್ರೀಕ್ ಪದದ ಮೂಲಧಾತುವು ಜೀವಾತ್ಮವನ್ನು ಸೂಚಿಸುತ್ತದೆ. ಏಕೆಂದರೆ ಪ್ರಾಚೀನ ಗ್ರೀಕರು “ಪ್ರಾಣಿಸಾಮ್ರಾಜ್ಯದ ಅಂತಸ್ಸತ್ವವೇ ಆತ್ಮ” ಎಂದು ನಂಬಿದ್ದರು. ಇದರ ಅಧ್ಯಯನದ ಮಹತ್ವದ ಬಗ್ಗೆ ಅರಿಸ್ಟಾಟಲ್ ಹೀಗೆ ಹೇಳುತ್ತಾನೆ: “(ಮಾನವನ) ಆತ್ಮದ ಅರಿವು ಸತ್ಯದ ಅರಿವನ್ನು ಮಾಡಿಕೊಳ್ಳುವಲ್ಲಿನ ಪ್ರಗತಿಗೆ ಬಹಳಷ್ಟು ಕೊಡುಗೆಯನ್ನು ನೀಡುತ್ತದೆ; ಅದಲ್ಲದೆ ಎಲ್ಲಕ್ಕಿಂತ ಮಿಗಿಲಾಗಿ, ನಿಸರ್ಗವನ್ನು ತಿಳಿದುಕೊಳ್ಳಲೂ ಇದು ನೆರವಾಗುತ್ತದೆ.”

### ಆತ್ಮವೋ ಮನಸ್ಸೋ?

ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞ ಡೆಕಾರ್ಟ್ ಆತ್ಮ ಎಂದರೆ ಮನಸ್ಸು ಅಥವಾ ಬುದ್ಧಿ ಎನ್ನುತ್ತಾನೆ; ಭಾವನೆಗಳು, ಇಚ್ಛಾಶಕ್ತಿ, ಆಲೋಚನೆಗಳು ಮತ್ತು ಜ್ಞಾನ – ಇವು ಅದರ ಗುಣಲಕ್ಷಣಗಳೆಂದು ವಿವರಿಸುತ್ತಾನೆ. ಆದರೆ ಹಾಬ್ಸ್ ಮತ್ತು ಸ್ಪಿನೋಜಾ ಅದನ್ನು ಒಪ್ಪುವುದಿಲ್ಲ. ಭಾವನೆಗಳಿಗಿಂತ ಹೆಚ್ಚಾಗಿ, ಮನುಷ್ಯನ ತಾರ್ಕಿಕ ಸಾಮರ್ಥ್ಯಕ್ಕೆ ಅವರು ಮಹತ್ವವನ್ನು ಕೊಡುತ್ತಾರೆ. ಆದರೆ ಮುಂದೆ, ಲಾಕ್, ಬರ್ಕ್‌ಲೆ, ಹ್ಯೂಮ್ ಮುಂತಾದ ಚಿಂತಕರು, ಮಾನವನಲ್ಲಿರುವ ಅರಿವು ಅಥವಾ ಜ್ಞಾನಗ್ರಾಹಿ ಅಂಶಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು, ಅದು ಚೈತನ್ಯದ ಕಾರ್ಯ ಎಂದು ವಾದಿಸುತ್ತಾರೆ. ಜಡವು ಜ್ಞಾನಗ್ರಾಹಿಯಾಗಲಾರದು. ಮಾನವನು ಜ್ಞಾನಗ್ರಾಹಿಯಾದ್ದರಿಂದ ಅವನು ಜಡನಲ್ಲ, ಚೈತನ್ಯಸ್ವರೂಪನು. ಹೀಗಾಗಿ ಮಾನವಾತ್ಮವು ಚೈತನ್ಯಸ್ವರೂಪದ್ದು ಎಂದು ಅವರ ವಾದ. ಹಿಂದೆ ಮಾನವಶಾಸ್ತ್ರವೆಂದರೆ, ಮಾನವನ ಬಾಹ್ಯ ನಡವಳಿಕೆಗಳ ಅಧ್ಯಯನ ಮಾತ್ರವಾಗಿತ್ತು. ಆದರೆ ಅದು ಅಂತರ್‌ವಿಶ್ಲೇಷಣೆಯ ಹಂತಕ್ಕೆ ಏರಿದುದನ್ನು ಇಲ್ಲಿ ನಾವು ಕಾಣಬಹುದು.

ಆದರೆ ಆಧುನಿಕ ಕಾಲದಲ್ಲಿ, ಮಾನವ ಅಧ್ಯಯನವು ಮತ್ತೆ ಬಾಹ್ಯ ಸ್ವರೂಪದ ಅಧ್ಯಯನವಾಗಿ ಮಾರ್ಪಟ್ಟಿತು. ಜೇಮ್ಸ್ ಮತ್ತು ಫ್ರಾಯ್ಡ್ ಅವರ ಬರಹಗಳಲ್ಲಿ ಆ ಪರಿವರ್ತನೆಯನ್ನು ಗುರುತಿಸಬಹುದು. ಆದರೆ ಜರ್ಮನಿಯ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಕ್ಯಾಂಟ್ ಮಾನವ ಮನಸ್ಸಿನ ಕಾರ್ಯವಿಧಾನಗಳನ್ನು ಅಧ್ಯಯನ ಮಾಡಬೇಕು; ಆದರೆ, ಆ ಮನಸ್ಸಿನ ಕಾರ್ಯವಿಧಾನಗಳು, ಚಿಂತನಾಶೀಲ ಆತ್ಮದ ನೈಸರ್ಗಿಕ ಗುಣಲಕ್ಷಣಗಳು ಎಂದು ಪರಿಗಣಿಸಬೇಕೆಂದು ಹೇಳುತ್ತಾನೆ. ಅಂತಹ ಆತ್ಮವನ್ನು ಅರಿಯುವುದು ಅಸಾಧ್ಯ; ಏಕೆಂದರೆ, ಅದು ಮಾನವನಿಗೆ ಸದ್ಯಕ್ಕೆ ಸಾಧ್ಯವಿರುವ ಎಲ್ಲ ಅನುಭವಗಳಿಗೂ ಹೊರತಾದುದು ಎಂದೂ ಸೇರಿಸುತ್ತಾನೆ.

ಹೀಗೆ ಪಾಶ್ಚಾತ್ಯ ಚಿಂತನೆಯಲ್ಲಿ ಕಾಲ ಕಳೆದಂತೆ, ಭೌತ ಜಗತ್ತಿನ ಅಧ್ಯಯನದ ಪರಿಧಿ ವಿಕಾಸಗೊಳ್ಳುತ್ತ ಹೋಯಿತಾದರೂ, ಮಾನವನ ಅಧ್ಯಯನವು ಕೇವಲ ಮಾನವನ ಮನಸ್ಸಿನ ಅಧ್ಯಯನಕ್ಕೆ ತನ್ನ ಪರಿಧಿಯನ್ನು ಸಂಕುಚಿತಗೊಳಿಸಿಕೊಂಡಿತು. ಪ್ರಾಚೀನ ಗ್ರೀಕ್ ಚಿಂತಕರ ಮಾನವ ಅಧ್ಯಯನವು ಮುಖ್ಯವಾಗಿ ಆತ್ಮದ ಅಧ್ಯಯನವಾಗಿದ್ದರೆ, ಅದು ನಂತರದ ದಿನಗಳಲ್ಲಿ ಕೇವಲ ಮನೋವಿಜ್ಞಾನವಾಗಿ ಮಾರ್ಪಟ್ಟಿತು.

ಹೀಗಾದರೂ ಮಾನವನ ಅಧ್ಯಯನವು ಜ್ಞಾನಶಾಖೆಯ ಬೇರೆ ಬೇರೆ ವಿಭಾಗಗಳಲ್ಲಿ ಮುಂದುವರಿದುಕೊಂಡೇ ಹೋಯಿತು. ಪ್ರಾಣಿವಿಜ್ಞಾನ ಶಾಸ್ತ್ರದ ಪಿತಾಮಹ ಚಾರ್ಲ್ಸ್ ಡಾರ್ವಿನ್ ಮಾನವನಿಗೂ ಮತ್ತು ಉನ್ನತ ಶ್ರೇಣಿಯ ಪ್ರಾಣಿಗಳಿಗೂ ಇರುವ ವ್ಯತ್ಯಾಸ, ಸ್ವರೂಪದ ಅಭಿವ್ಯಕ್ತಿಯ ತರತಮದಲ್ಲಿ ಮಾತ್ರವೇ ಹೊರತು, ಸ್ವರೂಪದಲ್ಲಿ ಅಲ್ಲ ಎನ್ನುತ್ತಾನೆ. ಹೀಗಾಗಿ, ‘ಮಾನವ ಒಬ್ಬ ವೈಚಾರಿಕ ಜಂತು’ (Man is a rational animal ) ಎಂಬ ಪ್ರಸಿದ್ಧ ವಾಕ್ಯವೂ ಇದೆ. ಬೇರೆ ಪ್ರಾಣಿಗಳಲ್ಲಿ ಇಲ್ಲದ ವೈಚಾರಿಕ ಶಕ್ತಿ ಮಾನವನಿಗೆ ಬಂದದ್ದು ಮಾನವನಿಗೆ ಆತ್ಮವಿರುವುದರಿಂದ ಎಂದು ಕೆಲವು ಚಿಂತಕರು ನಂಬಿದ್ದರು. ಹಾಗಾದರೆ ಅಂತಹ ಆತ್ಮವು ಬೇರೆ ಪ್ರಾಣಿಗಳಲ್ಲಿ ಇಲ್ಲವೇ ಎನ್ನುವುದು ಪಾಶ್ಚಾತ್ಯ ಚಿಂತನೆಯಲ್ಲಿ ಇಂದಿಗೂ ಚರ್ಚಾಸ್ಪದ ಸಂಗತಿಯಾಗಿಯೇ ಉಳಿದಿದೆ.

### ವೇದೋಪನಿಷತ್ತುಗಳಲ್ಲಿ ಮಾನವನ ಪರಿಕಲ್ಪನೆ

ಸಮುದ್ರಕ್ಕೂ ಅದರ ತರಂಗಗಳಿಗೂ ಯಾವ ಸಂಬಂಧವಿದೆಯೋ ಬ್ರಹ್ಮಾಂಡಕ್ಕೂ ಮಾನವನಿಗೂ ಅದೇ ರೀತಿಯ ಸಂಬಂಧವಿದೆಯೆಂದು ವೇದಗಳು ಹೇಳುತ್ತವೆ. ಆದರೆ ಮಾನವಜೀವಿತವು ಅಗಣಿತ ಕಾಲದ ದೃಷ್ಟಿಯಿಂದ ನೋಡಿದಾಗ, ಕ್ಷಣಿಕ. ಆದರೆ, ಮಾನವನ ಪಾತ್ರವು

ಕ್ಷುಲ್ಲಕವಾದುದು ಎಂದು ಇದರ ಅರ್ಥವಲ್ಲ. ತರಂಗಗಳು ಒಟ್ಟು ಸಮುದ್ರದ ಅಂಗಗಳು; ಅವುಗಳು ಸಮುದ್ರವನ್ನು ಬಿಟ್ಟು ಸ್ವತಂತ್ರವಾಗಿ ತಮ್ಮ ವ್ಯಕ್ತಿತ್ವದ ಅಭಿವ್ಯಕ್ತಿಯನ್ನು ಮಾಡಿಕೊಳ್ಳಲಾರವು. ಅದೇ ರೀತಿ ಮಾನವ ವ್ಯಕ್ತಿತ್ವವು ಸಮಷ್ಟಿಯ ಅಂಗವಾಗಿ ಅಭಿವ್ಯಕ್ತಗೊಂಡಾಗ ಅದರ ಘನತೆಯು ಪೂರ್ಣವೂ ವಾಸ್ತವವೂ ಆಗಿರುತ್ತದೆ; ಪ್ರತ್ಯೇಕ ದೃಷ್ಟಿಯಿಂದ ಅಭಿವ್ಯಕ್ತಗೊಂಡಾಗ ಅಪೂರ್ಣವೂ ಮಿಥ್ಯೆಯೂ ಆಗಿರುತ್ತದೆ. ಇದು ವೇದಋಷಿಗಳ ನಿಲುವು. ಆದರೆ ಸಮಷ್ಟಿದೃಷ್ಟಿ ಅತ್ಯಂತ ಕಠಿಣ. **"ಜೀವನದಿಯು ಯಶಸ್ಸಿಗೆ ಪ್ರತಿಬಂಧಕವೂ ಅಮಂಗಳಕರವೂ ಆದ ಬಂಡೆಗಳಿಂದ ಕೂಡಿದೆ. ಜೀವನದಲ್ಲಿ ಕ್ಲೇಶದಾಯಕ ಸನ್ನಿವೇಶಗಳು ಅನೇಕ ಇವೆ. ಎಲ್ಲವನ್ನೂ ದಾಟಿ ಮಂಗಳಕರವಾದ ಅಂಶಗಳನ್ನು ಸಂಗ್ರಹಿಸುತ್ತ ಎದೆಗುಂದದೆ ಮುನ್ನುಗ್ಗಬೇಕು"** ಎನ್ನುವುದು ವೇದಋಷಿಗಳ ಜೀವನ ಸಂದೇಶ. ಈ ಮಾರ್ಗದ ಕಡೆಯಲ್ಲಿ ಮಾನವನ ಘನತೆಯು ಅದರ ಪರಿಪೂರ್ಣ ರೂಪದಲ್ಲಿ ಪ್ರಕಟವಾಗುವುದು ಎನ್ನುವ ಪ್ರಚಂಡ ಆಶಾಭಾವನೆಯನ್ನು ಕೂಡ ವೈದಿಕ ಸಾಹಿತ್ಯ ಹೊಂದಿದೆ.

ಮೇಲಿನ ಸಕಾರಾತ್ಮಕ ಧೋರಣೆಯೇ ಮಾನವ ಸ್ವರೂಪದ ವಿಸ್ಮಯಕಾರಿ ಉನ್ನತ ಹಂತಗಳಿಗೆ, ತಮ್ಮ ಪ್ರಜ್ಞೆಯನ್ನು ಕೊಂಡೊಯ್ಯಲು ವೈದಿಕ ಋಷಿಗಳಿಗೆ ಪ್ರೇರಣೆಯನ್ನು ನೀಡಿತು. ಆ ತನ್ಮಯತೆಯ, ಗಾಢ ಅನುಭಾವದ ಫಲಶ್ರುತಿಗಳೇ ಉಪನಿಷತ್ತುಗಳು. ವಿಶ್ವಾಂಗವಾಗಿ ಮಾನವನ ಸ್ವರೂಪವನ್ನು ಕಂಡಿದ್ದ ವೇದಕಾಲೀನ ಋಷಿಗಳ ಅರಿವು **ವಿಶ್ವಚೈತನ್ಯವೇ ಮಾನವನ ನೈಜ ಸ್ವರೂಪ** ಎಂಬ ಪರಮ ನಿಷ್ಕರ್ಷೆಗೆ ಇಲ್ಲಿ ತಲುಪುತ್ತದೆ. ಈ ಮನೋಹರ ಆನುಭಾವಿಕ ಪಯಣದ ಹಲವು ಮಜಲುಗಳನ್ನು ನಾವು ಉಪನಿಷತ್ತುಗಳಲ್ಲಿ ಗುರುತಿಸಬಹುದು.

೧. ಛಾಂದೋಗ್ಯ ಉಪನಿಷತ್ತು, ಒಂದೇ ಮಣ್ಣಿನಲ್ಲಿ ಹಲವು ಮಡಕೆಗಳನ್ನು ಮಾಡಿದ್ದರೂ, ಅವುಗಳ ನಾಮರೂಪಗಳಲ್ಲಿ ಭೇದವೇ ಹೊರತು ವಸ್ತುಶಃ ಇರುವುದು ಕೇವಲ ಮಣ್ಣು ಹೇಗೋ ಹಾಗೆ, ಮಾನವ ಪ್ರಜ್ಞೆಯು ಹಲವು ಶರೀರಗಳ ಮೂಲಕ ವಿಧವಿಧವಾಗಿ ಪ್ರಕಟಗೊಳ್ಳುತ್ತಿದ್ದರೂ ಅದು ಏಕರೂಪವಾದದ್ದು ಎಂದು ಹೇಳುತ್ತದೆ.

೨. ಬೃಹದಾರಣ್ಯಕ ಉಪನಿಷತ್ತು ಮಾನವನ ಕೆಳ ಪ್ರಜ್ಞಾಹಂತಗಳೆಲ್ಲವೂ ಉನ್ನತ ಪ್ರಜ್ಞೆಯ ಆಭಾಸಮಾತ್ರಗಳು ಎಂದು ಹೇಳುತ್ತದೆ. ಅದನ್ನು **ಧ್ಯಾಯತೀವ ಲೇಲಾಯತೀವ** – ಅದು ಧ್ಯಾನಿಸುವಂತೆ ತೋರುತ್ತದೆ, ತೂಗಾಡುವಂತೆ ತೋರುತ್ತದೆ ಎಂಬ ವಾಕ್ಯಗಳಲ್ಲಿ ಧ್ವನಿತವಾಗಿರುವುದನ್ನು ಗುರುತಿಸಬಹುದು. ಅಲ್ಲದೆ, ಆತ್ಮನನ್ನು **ವಿಜ್ಞಾತಾ** (ತಿಳಿದುಕೊಳ್ಳುವವನು) ಎಂದು ಅದು ಗುರುತಿಸಿದೆ. ಬೇರೆಲ್ಲ ಸಂಗತಿಗಳೂ ಜ್ಞೇಯಗಳು, ಆತ್ಮ ಮಾತ್ರವೇ ವಿಜ್ಞಾತಾ. ಆದ್ದರಿಂದ ಆತ್ಮವನ್ನು ಬೇರೆ ವಸ್ತುಗಳ ಹಾಗೆ ತಿಳಿದುಕೊಳ್ಳಲು ಸಾಧ್ಯವಿಲ್ಲ ಎಂದು ಈ ಉಪನಿಷತ್ತು ಹೇಳುತ್ತದೆ (ಕ್ಯಾಂಟ್ ಇದೇ ನಿಷ್ಕರ್ಷೆಗೆ ಬಂದಿದ್ದರೂ, ಉಳಿದ ಅನುಭವಗಳಿಂದ ಶುದ್ಧ ವಿಷಯಿಯನ್ನು ಬಿಡಿಸಿ ನೋಡುವ ಅನುಭವ ಸಾಧ್ಯ ಎಂದು ನಂಬಿರಲಿಲ್ಲ. ಅದು ಸಾಧ್ಯವಷ್ಟೇ ಅಲ್ಲ, ಅದೇ ನಿಜವಾದ ಸತ್ಯ ಎಂದು ಉಪನಿಷತ್ತುಗಳ ಋಷಿಗಳು ಸಾಧಿಸಿ ತೋರಿಸಿದ್ದರು).

೩. ತೈತ್ತಿರೀಯ ಉಪನಿಷತ್ತು ಇದನ್ನೇ ಪಂಚಕೋಶ ವಿವೇಕದ ಮೂಲಕ ವಿವರಿಸುತ್ತದೆ. (ನೋಡಿ, ವಿವೇಕಪ್ರಭ ಮೇ ೨೦೦೮, ಪುಟ ೨೪) ದೇಹ-ಪ್ರಾಣ-ಮನಸ್ಸು-ಬುದ್ಧಿ-ಆನಂದಾನುಭವಗಳಲ್ಲಿ ಪ್ರಜ್ಞೆಯ ಸ್ಪರ್ಶದಿಂದಲೇ 'ನಾನು' ಎಂಬ ಅನುಭವವು ಉಂಟಾಗುವುದಾದರೂ, ಶುದ್ಧ ಪ್ರಜ್ಞೆಯು ಇವುಗಳಿಂದ ಭಿನ್ನವಾಗಿದೆ ಎನ್ನುವುದೇ ಪಂಚಕೋಶ ವಿವರಣೆಯ ಬೋಧನೆ.

೪. ಕಠೋಪನಿಷತ್ತು ದೇಹೇಂದ್ರಿಯಮನಸ್ಸುಗಳ ಸಂಬಂಧದಿಂದ ಭೋಕ್ತಾ (ಭೋಗಿಸುವವನು) ಎಂಬುದಾಗಿ ಮಾನವಾತ್ಮವನ್ನು ಔಪಚಾರಿಕವಾಗಿ ಕರೆದಿದೆ. ಆದರೆ, ಅವುಗಳನ್ನು ಮೀರಿನಿಂತ ಅಶಬ್ದ, ಅರೂಪ, ಅವ್ಯಯ ಸ್ವರೂಪವೇ ಆತ್ಮ ಎಂದೆಲ್ಲ ಹೇಳಿ ಮಾನವನ ಆತ್ಮವು ಸ್ವಭಾವತಃ ನಿರ್ಗುಣವಾದದ್ದು ಎಂದು ಎತ್ತಿ ತೋರಿಸಿದೆ.

೫. ಮಾಂಡೂಕ್ಯೋಪನಿಷತ್ತು ಜಾಗೃತ್, ಸ್ವಪ್ನ, ಸುಷುಪ್ತಿಗಳೆಂಬ ಪ್ರಜ್ಞೆಯ ಮೂರು ಅನುಭವಾವಸ್ಥೆಗಳನ್ನು ನಿಜವಾಗಿಯೂ ಅನುಭವಿಸುತ್ತಿರುವವನು ಒಬ್ಬನೇ ಎಂದು ಗುರುತಿಸಿದೆ. ಈ ಮೂರು ಪ್ರಜ್ಞಾವಸ್ಥೆಗಳೂ ಭ್ರಮೆಯಷ್ಟೇ; ನಿಜವಾಗಿ ಅವೆಲ್ಲ ಅವಸ್ಥೆಗಳಲ್ಲಿ ಅನುಭವವಾಗುತ್ತಿರುವುದು ತುರೀಯ ಎಂದು ಕರೆಯಲಾಗುವ ಪರಿಶುದ್ಧಪ್ರಜ್ಞೆ ಮಾತ್ರ; ಅದೇ ಮಾನವನ ಅನುಭವದ ಮೂಲಸ್ರೋತ ಎಂದು ಅದು ಹೇಳುತ್ತದೆ.

೬. ಕೇನೋಪನಿಷತ್ತು ಇಂದ್ರಿಯಗಳ ಅನುಭವದ ಮೂಲಕಾರಣವನ್ನು ಹುಡುಕತೊಡಗುತ್ತದೆ. ಇಂದ್ರಿಯಗಳಿಗೆ ಪ್ರಜ್ಞಾದಾಯಕವಾಗಿರುವುದು ಯಾವುದು ಎಂಬ ಪ್ರಶ್ನೆಯನ್ನು ಎತ್ತಿ, ಮನಸ್ಸು ಬುದ್ಧಿಗಳನ್ನೂ ತನ್ನ ಚೈತನ್ಯದ ಬೆಳಕಿನಿಂದ ಬೆಳಗುವ ಆತ್ಮವೇ ಅದು ಎಂಬ ನಿಷ್ಕರ್ಷೆಗೆ ಬರುತ್ತದೆ.

೭. ಐತರೇಯ ಉಪನಿಷತ್ತಿನಲ್ಲಿ ಋಷಿಗಳು ನಾವು ಆತ್ಮವೆಂದು ಉಪಾಸನೆ ಮಾಡುತ್ತಿರುವುದು ಯಾವುದು ಎಂಬ ಜಿಜ್ಞಾಸೆಯನ್ನು ಮಾಡುತ್ತಾರೆ. ಈ ಆತ್ಮವು ಮನುಷ್ಯ ಮಾಡುವ ವಿವಿಧ ಕ್ರಿಯೆಗಳು, ಆಲೋಚನೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಅಭಿವ್ಯಕ್ತಗೊಳ್ಳುವುದಾದರೂ ಅದು ಒಂದೇ ಆಗಿದೆ. ಈ ರೀತಿ ವಿಶ್ಲೇಷಿಸಿದ ಋಷಿಗಳು ಅಂತಹ ಅಖಂಡದೃಷ್ಟಿಯಿಂದ ಆತ್ಮವನ್ನು ನಾವು ಉಪಾಸಿಸಬೇಕೇ ಹೊರತು ಖಂಡದೃಷ್ಟಿಯಿಂದ ಉಪಾಸಿಸಬಾರದು ಎಂಬ ತೀರ್ಮಾನಕ್ಕೆ ಬರುತ್ತಾರೆ.

೮. ಈಶಾವಾಸ್ಯ ಉಪನಿಷತ್ತು, ಇಂದ್ರಿಯಗಳ ದೃಷ್ಟಿಯಿಂದ ಮಾನವಾತ್ಮದ ಜಿಜ್ಞಾಸೆಯನ್ನು ಮಾಡುತ್ತದೆ. ಆತ್ಮವು ಎಲ್ಲ ಜೀವಿಗಳಲ್ಲಿಯೂ ಒಂದೇ ಆಗಿದೆ. ಅದು ಸಾಮಾನ್ಯ ದೃಷ್ಟಿಗೆ ವೈಪರೀತ್ಯಗಳ ಸಂಗಮವೆಂಬಂತೆ ತೋರುತ್ತದೆ. ಅಚಲವಾಗಿದ್ದರೂ ಮನಸ್ಸಿಗಿಂತ ವೇಗವಾದುದು ಅದು. ಮನಸ್ಸಿಗೇ ಅಗ್ರಾಹ್ಯವಾದ ಮೇಲೆ ಇನ್ನು ಇಂದ್ರಿಯಗಳಿಗೆ ಅದು ಗ್ರಾಹ್ಯವಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದು ನಿಂತಿರುತ್ತದೆ; ಆದರೂ, ಓಡುತ್ತಿರುವಂತೆ ತೋರುತ್ತದೆ. ಅದು ಎಲ್ಲ ಜೀವಿಗಳಲ್ಲಿ ನಡೆಯುವ ಕಾರ್ಯಗಳನ್ನು ನಿಯಂತ್ರಿಸುತ್ತಿರುತ್ತದೆ.

೯. ಮುಂಡಕೋಪನಿಷತ್ತಿನಲ್ಲಿ ಆತ್ಮವು ಅತ್ಯಂತ ಸಮೀಪವರ್ತಿಯಾದುದು ಎಂದು ಬಣ್ಣಿಸಲಾಗಿದೆ. ನೋಡುವುದು, ಕೇಳುವುದು ಮೊದಲಾದ

ಪ್ರಕಾರಗಳಿಂದ ಸಂಚರಿಸುವ ಶಕ್ತಿಯ ಆಗರ ಇದೇ ಆಗಿದೆ. ಇದು ಎಲ್ಲ ಪದಗಳಿಗೂ, ಅರ್ಥಗಳಿಗೂ ಆಶ್ರಯಸ್ಥಾನ. ಆತ್ಮನು ಮನಸ್ಸಿನ ನಿಯಂತಾರ; ಪ್ರಾಣಕ್ಕೆ ಚೈತನ್ಯದಾಯಕ; ಬುದ್ಧಿಯ ಪ್ರೇರಕ. ಹೀಗೆ ವಿಷಯವಸ್ತುಗಳನ್ನು ಅರಿತುಕೊಳ್ಳುವ ಮನಸ್ಸು ಬುದ್ಧಿಗಳ ಪ್ರಕಾಶಕನೂ ಅವುಗಳ ಕಾರ್ಯವನ್ನು ಸುಮ್ಮನೆ ಗಮನಿಸುವ ಸಾಕ್ಷಿಯೂ ಎಂಬಂತೆ ಈ ಉಪನಿಷತ್ತು ಆತ್ಮನನ್ನು ಬಿಂಬಿಸುತ್ತದೆ.

೧೦. ಪ್ರಶ್ನೋಪನಿಷತ್ತಿನಲ್ಲಿ, ಇಂದ್ರಿಯಗಳೆಲ್ಲವೂ ಕನಸಿನ ಸಮಯದಲ್ಲಿ ತಮ್ಮ ತಮ್ಮ ಕಾರ್ಯಗಳನ್ನು ತ್ಯಜಿಸಿ ಮನಸ್ಸಿನಲ್ಲಿ ಲಯವಾದಾಗ, ಕನಸನ್ನು ನೋಡುವವರು ಯಾರು? ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಅವನೇ ಕ್ಷೇತ್ರಜ್ಞ ಅಥವಾ ಜೀವಾತ್ಮ.

೧೧. ಮುಂಡಕೋಪನಿಷತ್ತು ಮತ್ತು ಶ್ವೇತಾಶ್ವತರ ಉಪನಿಷತ್ತುಗಳೆರಡರಲ್ಲೂ ಬಂದಿರುವ ಒಂದು ಸಮಾನ ರೂಪಕ ವಿಶಿಷ್ಟವಾಗಿದೆ. ಒಂದು ಮರವನ್ನು ಎರಡು ಹಕ್ಕಿಗಳು ಆಶ್ರಯಿಸಿಕೊಂಡಿವೆ. ಒಂದು ಹಣ್ಣುಗಳನ್ನು ತಿನ್ನುತ್ತಿದೆ. ಇನ್ನೊಂದು ಸುಮ್ಮನೆ ಕುಳಿತಿದೆ. ಹಾಗೆಯೇ ಶರೀರದಲ್ಲಿ ಕರ್ಮಫಲಗಳನ್ನು ಜೀವಿಯು ಭೋಗಿಸುತ್ತಾನೆ. ಪರಮಾತ್ಮನು ಸಾಕ್ಷಿಯಾಗಿ ಇರುತ್ತಾನೆ. ಇವೆರಡೂ ಬೇರೆ ಬೇರೆ ಅಲ್ಲ ಎನ್ನುವುದು ಇಲ್ಲಿರುವ ರಹಸ್ಯ. ಪರಮಾತ್ಮ ಚೈತನ್ಯ ತಾನು ಕರ್ತಾ, ಭೋಕ್ತಾ ಎಂಬ ಭಾವವನ್ನು ಪಡೆದುಕೊಂಡಾಗ, ಎರಡು ಹಕ್ಕಿಗಳ ಹಾಗೆ, ಎರಡು ಆತ್ಮಗಳೆಂಬಂತೆ ಕಾಣುತ್ತದೆ. ಆದರೆ ಜೀವಭಾವವು ನಾಶವಾದಾಗ, ಇರುವುದು ಒಂದೇ ಆತ್ಮ, ಅದು ಚೈತನ್ಯಸ್ವರೂಪ ಎಂಬ ಅನುಭವವಾಗುತ್ತದೆ.

### ಭಾರತೀಯ ದರ್ಶನಗಳಲ್ಲಿ ಮಾನವನ ಪರಿಕಲ್ಪನೆ

ಮೇಲಿನ ತಾತ್ವಿಕ ದರ್ಶನದ ಪ್ರಭಾಕಿರಣಗಳು ಹಲವು ತಾರ್ಕಿಕ ಪಂಗಡಗಳ ಸೃಷ್ಟಿಗೆ ಕಾರಣವಾಗಿದ್ದನ್ನು ನೋಡುತ್ತೇವೆ. ಅವೆಲ್ಲವೂ ಮೇಲಿನ ಆತ್ಮದ ಪರಿಕಲ್ಪನೆಗಳನ್ನು ವಿವಿಧ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿವೆ. ಸಾಂಖ್ಯ ಮತ್ತು ಯೋಗದರ್ಶನಗಳು ಜಗತ್ತಿನ ಮೂಲವಾದ ಪ್ರಕೃತಿಯು ಒಂದೇ ಎಂದು ಬಗೆದಿದ್ದರೂ, ಅದನ್ನು ಅನುಭವಿಸುವ ಚೈತನ್ಯಸ್ವರೂಪರಾದ ಪುರುಷರು ಅನೇಕರು ಎಂದು ಪರಿಗಣಿಸುತ್ತದೆ. ನ್ಯಾಯವೈಶೇಷಿಕಗಳು ಚೈತನ್ಯಸ್ವರೂಪವಾದ ಆತ್ಮಗಳ ಬಹುತ್ವದ ಜೊತೆಗೆ, ಅವು ಸುಖದುಃಖ ಮೊದಲಾದ ಗುಣಗಳಿಂದ ಕೂಡಿರುತ್ತವೆ ಎಂದು ಹೇಳುತ್ತವೆ. ಪೂರ್ವಮೀಮಾಂಸಾ ಶಾಸ್ತ್ರವು ಆತ್ಮನನ್ನು ಕೇವಲ ಭೋಕ್ತೃವಿನ ರೂಪದಲ್ಲಷ್ಟೇ ಕಾಣುತ್ತದೆ.

ಉತ್ತರಮೀಮಾಂಸಾ ಅಥವಾ ವೇದಾಂತ ದರ್ಶನವು ಆತ್ಮವು ಸ್ವಭಾವತಃ ಚೈತನ್ಯಸ್ವರೂಪವೂ, ಪರಿಶುದ್ಧವೂ ಎಂದು ಹೇಳುತ್ತದೆ. ದ್ವೈತವಾದಿಗಳು ಜೀವಿಯು ಈಶ್ವರಾಧೀನ, ಅವನು ಸ್ವತಂತ್ರನಲ್ಲ; ಹಾಗೆಯೇ ಜೀವಿಗಳು ಬಹಳವಾಗಿದ್ದು, ಅವರುಗಳಲ್ಲಿ ಪರಸ್ಪರ ಭೇದವಿದೆ ಎಂಬ ವಾಸ್ತವ ದೃಷ್ಟಿಯನ್ನು ತೆಳೆಯುತ್ತಾರೆ. ವಿಶಿಷ್ಟಾದ್ವೈತವಾದಿಗಳು, ಭಗವಂತ ಮತ್ತು ಜೀವಿಯ ನಡುವಣ ಸಂಬಂಧ ಅಭೇದಾತ್ಮಕವಾದರೂ ಅದು ಅಂಶಿ-ಅಂಶ, ಶರೀರಿ-ಶರೀರಗಳೆಂಬ ವಿಶಿಷ್ಟಾಂಶವನ್ನು ಹೊಂದಿದೆ ಎಂದು ಪ್ರತಿಪಾದಿಸುತ್ತಾರೆ.

> **ಸತ್ಯವೂ, ಸನಾತನವೂ, ನಿತ್ಯಧನ್ಯವೂ ಪರಿಶುದ್ಧವೂ ಆದ ಪರಿಪೂರ್ಣ ಆತ್ಮವೇ ಪ್ರತಿ ಜೀವಿಯ ಹಿನ್ನೆಲೆಯಾಗಿದೆ. ಈ ಆತ್ಮವೇ ಪತಿತರನಲ್ಲಿ ಮತ್ತು ಪವಿತ್ರಾತ್ಮನಲ್ಲಿ, ಸುಖಿಯಲ್ಲಿ, ದುಃಖಿಯಲ್ಲಿ, ಸೌಂದರ್ಯದಾಗರದಲ್ಲಿ ಮತ್ತು ಕುರೂಪಿನ ಬೀಡಿನಲ್ಲಿ, ಮಾನವನಲ್ಲಿ ಮತ್ತು ಪ್ರಾಣಿಗಳಲ್ಲಿ ಇರುವುದು. ಇದೇ ಸ್ವಯಂಜ್ಯೋತಿ... ನೀನೇ ಅವನು ಎಂಬುದನ್ನು ಅರಿತು, ಅದರಂತೆ ನಿನ್ನ ಜೀವನವನ್ನು ತಿದ್ದಿಕೋ. ಯಾರು ಇದನ್ನು ಅರಿತು ಜೀವನವನ್ನು ತಿದ್ದಿಕೊಳ್ಳುವರೋ ಅವರು ಎಂದಿಗೂ ಅಜ್ಞಾನದಲ್ಲಿ ತೊಳಲುವುದಿಲ್ಲ.** – ಸ್ವಾಮಿ ವಿವೇಕಾನಂದ

ಅದ್ವೈತಿಗಳು ಜೀವಿಯೆಂಬ ಕಲ್ಪನೆಯೇ ಮಿಥ್ಯಾರೂಪದ್ದಾಗಿದ್ದು, ಯಥಾರ್ಥ ದೃಷ್ಟಿಯಲ್ಲಿ ಅದು ಚೈತನ್ಯರೂಪವೇ ಎಂದು ಹೇಳುತ್ತಾರೆ. ಪ್ರತ್ಯೇಕತೆಯ ಮತ್ತು ಬಹುತ್ವದ ಕಲ್ಪನೆಯೇ ಅವಿದ್ಯೆ ಎಂದು ನಂಬುತ್ತಾರೆ. ಇಲ್ಲಿ ಮನುಷ್ಯನ ಸ್ವರೂಪದ ಕಲ್ಪನೆಯು ತನ್ನ ಉಚ್ಚಾçಯ ಸ್ಥಿತಿಗೆ ಮುಟ್ಟುವುದನ್ನು ನಾವು ಕಾಣಬಹುದು.

### ಉಪಸಂಹಾರ

ಆತ್ಮದ ಬಗೆಗಿನ ಹಲವು ದೃಷ್ಟಿಕೋನಗಳ ನಡುವೆ ಒಂದು ಮಾತಂತೂ ನಿಜ. ಮಾನವನು ತನ್ನನ್ನು ತಾನು ಕೇವಲ ಜಡವೆಂದು ಪರಿಗಣಿಸಿಕೊಳ್ಳಬೇಕಾಗಿಲ್ಲ, ತನ್ನನ್ನು ಅಲ್ಪನೆಂದು ಕಡೆಗಣಿಸಿಕೊಳ್ಳಬೇಕಾಗಿಯೂ ಇಲ್ಲ. ತಾನು ಈಗ ಇರುವ ಹಂತದಿಂದ ತನ್ನ ಅರಿವಿನ ಪರಿಧಿಯನ್ನು ವಿಕಾಸಗೊಳಿಸಲು ಅಥವಾ ವಿಸ್ತಾರಗೊಳಿಸಿಕೊಳ್ಳಲು, ಆ ಮೂಲಕ ತನ್ನ ಅನುಭವಗಳನ್ನು ಮತ್ತು ಬದುಕನ್ನು ಶ್ರೇಷ್ಠ ಮಟ್ಟದ್ದಾಗಿಸಿಕೊಳ್ಳಲು ಅವನಲ್ಲಿ ವಿಪುಲ ಸಾಧ್ಯತೆಗಳು ಅಂತರ್ಗತವಾಗಿಯೇ ಇವೆ. ಯಾವಾಗ ಅರಿವಿನ ಪರಿಧಿಯು ಅನಂತವಾಗುತ್ತದೆಯೋ, ಆಗ ಅನುಭವವೂ ಪರಿಪೂರ್ಣ ಸ್ಥಿತಿಗೆ ಬಂದು ತಲುಪುತ್ತದೆ. ಆಗ ಮಾನವನು ಪರಮೋಚ್ಚ ಅನುಭೂತಿಯನ್ನು ಪಡೆಯುತ್ತಾನೆ. ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ತತ್ತ್ವಚಿಂತನೆಗಳ, ಧರ್ಮಗಳ ಉದ್ದೇಶವೇ ಇದು. ಅದನ್ನು ಸೂಚಿಸುವ ಪರಿಭಾಷೆಗಳು, ಅದನ್ನು ಸಾಧಿಸಲು ಬೋಧಿಸುವ ಸಾಧನಾ ಮಾರ್ಗಗಳು ಮಾತ್ರ ಬೇರೆ ಬೇರೆ.

ಮಾನವಜೀವಿತದ ಪರಮೋದ್ದೇಶವನ್ನು ಸಾಕಾರಗೊಳಿಸಿಕೊಳ್ಳಲು ಮಾನವನು **ತಾತ್ತ್ವಿಕವಾಗಿ ಅಖಂಡ ಭಾವನೆಯನ್ನೂ ಭಾವನಾತ್ಮಕವಾಗಿ ಸಮತ್ವ ಭಾವವನ್ನೂ ಬೆಳೆಸಿಕೊಳ್ಳಬೇಕು.** ಅದಕ್ಕಾಗಿ ತಾನು ಕಾಣುವ ಜಗತ್ತನ್ನೂ ಮತ್ತು ತನ್ನನ್ನೂ, ಮೀರಿ ನಿಂತಿರುವ ಸರ್ವವ್ಯಾಪಿ ತತ್ತ್ವವೊಂದರ ಬೆಳಕಿನಲ್ಲಿ ತನ್ನ ಬಾಳನ್ನು ಬೆಳಗಿಸಿಕೊಳ್ಳಬೇಕು. ತನ್ನ ಬಗ್ಗೆ ತನಗಿರುವ ಅಪನಂಬಿಕೆಗಳನ್ನು ನೀಗಿಸಿಕೊಳ್ಳುವ ಜ್ಞಾನಪ್ರಾಪ್ತಿಗಾಗಿ ಆ ಭಗವತ್ತತ್ತ್ವಕ್ಕೆ ಮುಡುಪಾಗಿರುವ ಜೀವಿತವನ್ನು ನಡೆಸಬೇಕು. ಸರ್ವಶಕ್ತನೂ, ಸರ್ವಜ್ಞನೂ, ಕಲ್ಯಾಣಮಯ ಸ್ವರೂಪನೂ ಆದ ಪರತತ್ತ್ವದ ಚಿಂತನೆಯಲ್ಲಿಯೇ ತನ್ನ ಜೀವನವನ್ನು ಸವೆಸಬೇಕು. ಆ ಮಹಾನ್ ತತ್ತ್ವವನ್ನೇ **ಈಶ್ವರ** ಅಥವಾ **ಭಗವಾನ್** ಎನ್ನುವರು. ಆ ವಿಚಾರವನ್ನೇ ನಾವು ಮುಂದಿನ ಸಂಚಿಕೆಯಲ್ಲಿ ಮಾಡುವುದು.

(ಮುಂದಿನ ತಿಂಗಳು: ಈಶ್ವರ ರಹಸ್ಯ)